Regd No B G. 155 Sn 7—9—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾಂ ಎಂ ವಿ ಸುಬ್ಬಂಶಾಯರು [? ನಸ್ಕೆ]

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩೦ ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಸನ್ಮಾನ

ಶ್ರೀ ಪಂಕಾಲ ಸ್ವಾಮಿಗಳವರು ಅನುಗ್ರಹಿಸಿದ ಮತ್ತು ಶ್ರೀಮನ್ಮಹಾರಾಜರು ಅವ್ಯಾಜಹಸ್ತದಿಂದ ದಯಪಾಲಿಸಿದ ನವರತ್ನಖಚಿತವಾದ ಗಂಡಭೇರುಂಡ ಕಂಠೀಹಾರವನ್ನೂ, ಧರ್ಮಕಾರ್ಯ ಪ್ರವೀಣ ಎಂಬ ಬಿರುದನ್ನೂ ಪಡೆದ ಸಾಹುಕಾರ್ ಟಿ ತಿಮ್ಮಪ್ಪನವರನ್ನು ನಿನ್ನೆ ಸಂಜೆ ವುರಭವನದಲ್ಲಿ ಸನ್ಮಾನಿಸಲಾಯಿತು. ಮಂತ್ರಿ ಶ್ರೀ ಕೆ ಪುಟ್ಟುಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು

ಆಹಾರ ಚರ್ಚೆ

ಈ ದಿನ ಪ್ರಾರಂಭವಾಗುವ ಲೋಕಸಭೆಯಲ್ಲಿ ಆಹಾರ ಚರ್ಚೆ ನಡೆಯುವದು

ಮಾತುಕತೆ

ಶ್ರೀ ಜಯಪ್ರಕಾಶರು ಅಧ್ಯಕ್ಷ ಅಧಕ್ಷ ಅಯೂಬರನ್ನು ರಾಷ್ಟ್ರಪತಿಭವನದಲ್ಲಿ ಭೇಟಿ ಮಾಡಿದ್ದರು.

ಸಿಂಹಳಕ್ಕೆ ಆಮದು

ಸಿಂಹಳದಲ್ಲಿ ಸಾಕಷ್ಟು ಮದ್ಯ ಇಳಿಸವರು ಇಲ್ಲವಾದ ಕಾರಣ ದಕ್ಷಿಣ ಭಾರತದಿಂದ ಆಮದು ಮಾಡಿಕೊಳ್ಳಲು ಯೋಚಿಸಲಾಗಿದೆ ಎಂದು ಕೊಲಂಬೊ ವಾರ್ತೆ

ವಿದೇಶಿ ವಿನಿಮಯ

ಮಾಜಿ ಕೆಂಪು ಷರ್ಟು ನಾಯಕ ಗಳಾರು ಖಾಸರು ಔಷಧೋಪಚಾರಕ್ಕೆ ಹೋಗಲು ವಿದೇಶಿ ವಿನಿಮಯ ಕೂಡಲು ತಗಿದೆ ಎಂದು ಕಂಠಾಚಿ ವಾರ್ತೆ.

★

ಕೊಡಗಿಗೆ ಮುಂದಿನ ತಾಲ್ಲೂಕುಗಳಿಗಾಗಿ ಈಚೆಗೆ 42 ಟನ್ನುಗಳ ಗೊಬ್ಬರ ಸರಬರಾಜಾಗಿದೆ ಎಂದು ಮಾಡಿಕೇರಿಯ ವಾರ್ತೆ

ಪೌರಾಣಿಕ ಗ್ರಂಥಗಳ ನಿಂದನೆ

ಪ್ರಾವಿಡ ಕಜಗಂ ಅಶ್ರಯದಲ್ಲಿ ನಡೆದ ಒಹರಂಗ ಸಭೆಯಲ್ಲಿ ಶ್ರೀ ಇ ವಿ ರಾಮಸ್ವಾಮಿ ನಾಯಕರು ಮತ್ತೆ ಹಿಂದೂ ಮತದ ಪೌರಾಣಿಕ ಗ್ರಂಥಗಳ ವಿರುದ್ಧ ಬ್ರಾಹ್ಮಣರ ವಿರುದ್ಧ ವಿಷಕಾರಲು ಹೊರಟಿರುವರು ಅವರು ವ್ಯಕ್ತಿಗಳನ್ನು ಸಾಹಿತ್ಯಗಳನ್ನು ಹಾಗೂ ಪತ್ರಿಕೆಗಳನ್ನು ಅವಹೇಳನ ಮಾಡಿದರು ಇಂತಹ ಕೆಡಕನ್ನು ಸರ್ಕಾರ ಯಾಕೆ ಪ್ರತಿಬಂದಿಸಿಲ್ಲವೋ ಎಂದು ಅಭಿಪ್ರಾಯ ಹೊರಪಟ್ಟಿರುವದು

ವಿಮಾಯಿತಿ ಅಪೇಕ್ಷೆ

ರಾತ್ರಿ ಕಾಲದಲ್ಲಿ ರಸ್ತೆಗಳಲ್ಲಿ ನಿಲ್ಲಿಸಲ್ಪಡುವ ವಾಹನದಗಳ ಮೇಲೆ ತೆರಿಗೆ ವಸೂಲ್ಮಾಡುವ ಅನುಜ್ಞೆಯನ್ನು ಬೊಂಬಾಯಿ ಪೌರಸಭೆ ಕಾರ್ಪೊರೇಷನ್ ಬೊಂಬಾಯಿ ಸರ್ಕಾರವನ್ನು ಕೇಳಿದೆ. ಬೊಂಬಾಯಿನ ಶೇಕಡ 60 ವಾಹನಗಳು ರಾತ್ರಿ ರಸ್ತೆಗಳಲ್ಲಿ ನಿಲ್ಲಿಸಲ್ಪಡುತ್ತಿವೆ. ಈ ತೆರಿಗೆಯಿಂದ ರೂ 75 ಲಕ್ಷ ಉತ್ಪತ್ತಿ ಆಗುವ ಸಂಭವವಿದೆ.

ಕೊಲೆ

ನೌಷೆರಾ ಭಾಗದಲ್ಲಿ ಮೊನ್ನೆ ಪಾಕಿಸ್ತಾನಿ ಸೇನೆಗಳು ಗುಂಡು ಹಾರಿಸಿದರು ಚಾಂಬ ಭಾಗದಲ್ಲಿ ರಜಕಾರರು ಸಂಗಪಾಲ ಗ್ರಾಮಕ್ಕೆ ನುಗ್ಗಿ ಬಂದು 5 ವರ್ಷದ ಮಗು ಹಾಗೂ ಒರ್ವ ದೊಡ್ಡವನ ಕೊಲೆ ಮಾಡಿದರು ಭಾರತ ಸೇನಿಕರು ಬಂದುದನ್ನು ಕಂಡು ತಮ್ಮ ದೇಶಕ್ಕೆ ಪಲಾರಿ ಆದರು.

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಅಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ

ಶ್ರೀ ಮಂಗಳವಾರ ಬಿದಿಗೆ ಹಸ್ತ
ಕಲ್ಕಿ ಜಯಂತಿ

ಈ ದಿನ ಚರ್ಚೆ

ಕೇರಳ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ಈ ದಿನ ಚರ್ಚೆಗೆ ಬರುವುದು ಅತ್ಯಸ್ತ ಕಾಂಗ್ರೆಸಿಗರು ಮಂತ್ರಿಮಂಡಲಕ್ಕೆ ಬೆಂಬಲ ಕೊಡುವಂತೆ ಕೇಂದ್ರ ಮಂತ್ರಿ ಶ್ರೀ ಎಸ್. ಕೆ. ಪಾಟೀಲರು ಮಾಡಿದ ಪ್ರಯತ್ನ ವಿಫಲವಾಯಿತು. ಅವಿಶ್ವಾಸ ನಿರ್ಣಯ ಅನುಮೋದಿತವಾಗಿ, ಶಂಕರ ಮಂತ್ರಿಮಂಡಲ ರಾಜೀನಾಮೆ ಕೊಟ್ಟರೆ, ಹೊಸ ಮಂತ್ರಿಮಂಡಲ ರಚನೆ ಆಗುವುದಿಲ್ಲವೆಂದೂ, ಅಧ್ಯಕ್ಷರ ಆಡಳಿತ ಬರುವದೆಂದೂ ಹೇಳಲ್ಪಟ್ಟಾಗಿದೆ. ಕೇರಳ ಪರಿಸ್ಥಿತಿಯನ್ನು ಭಾರತ ಸರ್ಕಾರ ವೀಕ್ಷಿಸುತ್ತಿದೆ

★

ದಂಡನೆ

ಅಹಮದಾಬಾದಿನಲ್ಲಿರುವ ಕಲ್ಕತ್ತಾದಲ್ಲಿನ ವ್ಯಾಪಾರ ಸಂಸ್ಥೆಯ ಇಬ್ಬರು ಪಾಲುದಾರರಿಗೆ, ತಲಾ ಒಂದು ತಿಂಗಳಿನ ಕಠಿಣ ಸಜೆಯನ್ನು ಮ್ಯಾಜಿಸ್ಟ್ರೇಟರು ವಿಧಿಸಿದರು ಇವರು ಮೆಡಿಕಲ್ ಇನ್ಸ್ಪೆಕ್ಟರುಗಳಿಗೆ ಸಬ್ ಸ್ಟಾಂಡರ್ಡ್ ಡಿಸ್ಟಿಲ್ ವಾಟರ್ ಮಾರಿದ್ದೇ ಅಪರಾಧನೆ 41 ಸಾವಿರ ಡಿಸ್ಟಿಲ್ ವಾಟರು ಆಂಪ್ಯೂಲುಗಳನ್ನು ವಶಪಡಿಸಿಕೊಳ್ಳಲಾಯಿತು. ರೂ 750 ಜುಲ್ಮಾನೆ ಕೊಡುವಂತೆ ಸಂಸ್ಥೆಗೆ ಆಜ್ಞೆ ಮಾಡಲಾಯಿತು.

★

ಧಾನಸಾ ದಂಡೆಯು ವಡೆದು ಪ್ರವಾಹ ನೀರು ರಾಜಧಾನಿಗೆ ನುಗ್ಗಿದೆ. ಪ್ರವಾಹದಿಂದ ದರ್ಜಿ ವಾಸದ ಕಾಲನಿಗಳೂ, ನೂರು ಗ್ರಾಮಗಳೂ ಗಂಡಾಂತರದಲ್ಲಿದೆ ಹತ್ತು ಮಂದಿ ಮಡಿದಿರುವರು

ಬರ್ಮಾ ಅಧ್ಯಕ್ಷ ನೇವಿ ಭಾರತಕ್ಕೆ ಭೇಟಿಕೊಡಲು ಆಹ್ವಾನ ಸ್ವೀಕರಿಸಿರುವರು.

ಮಾತುಕತೆ

ಕಂಠಾಚಿಯಿಂದ ಬಂದಿರುವ ವಾರ್ತೆ ಪ್ರಕಾರ ಶ್ರೀ ಜಯಪ್ರಕಾಶ ನಾರಾಯಣರು ಅಧ್ಯಕ್ಷ ಅಯೂಬರನ್ನು ಕಾಣಲಿರುವರೆಂದೂ, ಭಾರತದ ಪ್ರಧಾನಿ ಶ್ರೀ ಲಾಲ ಬಹಾದ್ದೂರ್ ಶಾಸ್ತ್ರಿಯವರು ಕೊಟ್ಟಿರುವ ಪತ್ರವನ್ನು ತಲುಪಿಸುವರೆಂದೂ ಪ್ರಕಟವಾಗಿದೆ.

★

ಆಗಮನ

ನವ ದೆಹಲಿಯ ಸ್ವತಂತ್ರ ಕ್ಲಬ್ಬಿನ ಅಶಯದಲ್ಲಿ ಈ ದಿನ ಒಂದು ಸಭೆಯಲ್ಲಿ ಭಾಷಣ ಮಾಡಲು ಸ್ವತಂತ್ರ ಪಾರ್ಟಿ ನಾಯಕ ಶ್ರೀ ಸಿ. ರಾಜಗೊಪಾಲಾಚಾರಿಯವರು ನವ ದೆಹಲಿಗೆ ಬಂದಿರುವರು.

★

ಪಂಜಾಬಿನಲ್ಲಿ ಪ್ರವಾಹದ ಹಾವಳಿ ಬಹು ತೀವ್ರವಾಗಿದೆಯೆಂದೂ ಮುಖ್ಯಮಂತ್ರಿ ಶ್ರೀ ರಾವ್ ಕಿಷನ್ ನವ ದೆಹಲಿಯಲ್ಲಿ ತಿಳಿಸಿದರು.

★

ಮಧ್ಯ ಪ್ರದೇಶ ಸರ್ಕಾರ ನಡೆಸುತ್ತಿರುವ ಹಾಲಿನ ಡೈರಿಗಳನ್ನು ಮುಚ್ಚಲು ನಿರ್ಧಾರವಾಗಿವೆ ಎಂದು ಭೂಪಾಲ ವಾರ್ತೆ

★

ಭಾರತ ಪ್ರಧಾನಿ ಶ್ರೀ ಲಾಲ ಬಹಾದ್ದೂರ್ ಶಾಸ್ತ್ರಿಗಳು ಸರಯುಕ್ತ ಅಂಬಗಣಂತಾಜ್ಯಕ್ಕೆ ಅಕ್ಟೋಬರು 2 ರಂದು ಭೇಟಿಕೊಡಲಿರುವರು.

★

ಮೊನ್ನೆ ಭಾರತ ಅಧ್ಯಕ್ಷರ 76ನೆಯ ಜನ್ಮೋತ್ಸವ ಅವರನ್ನು ದೇಶದ ಪ್ರಧಾನ ಅಭಿನಂದಿಸಲಾಯಿತು.

★

ಚೀನಾದ ಉಸ್ತುವಾರಿ ಸೇನಿಕರು ಸಿಕ್ಕಿಂಗೆ ನುಗ್ಗಿದ್ದರ ಬಗ್ಗೆ ಭಾರತವು ಚೀನಾಕ್ಕೆ ಪ್ರತಿಭಟನೆ ಸಲ್ಲಿಸಿದೆ.

ಎಲ್ ಐ ಸಿ ವಾರ್ತೆ

ಬೊಂಬಾಯಿ— ಜೀವನಿವಾ ಕಾರ್ಪೊರೇಷನ್‌ನಿಂದ ರಾಜ್ಯ ಸರಕಾರಗಳಿಗೆ ವಸತಿ ಯೋಜನೆಗೆ ವರ್ಷಕ್ಕೆ ರೂ 12 ಕೋಟಿ ದೊರೆಯುವುದೆಂದು ಅಧ್ಯಕ್ಷ ಶ್ರೀ ಕೌಲ್‌ರವರು ಹೇಳಿದರು : 3 ನೇ ಯೋಜನೆಯಲ್ಲಿ ಸಹಕಾರಿ ಭೂ ಅಡವಾನ ಬ್ಯಾಂಕುಗಳಿಗೆ ಪ್ರತಿ ವರ್ಷ 6 ಕೋಟಿ ರೂಗಳನ್ನು ಎಲ್ ಐ ಸಿ ಕೊಡುವುದಾಗಿ ತಿಳಿಸಿದರು.

ಶ್ರೀ ಹರಿಯ ಭಾಷಿತ — ಸತೀ ಧರ್ಮ

ಸಂಕೇಲಿ ಗ್ರಾಮದ ಭುಜ್ ಕುನ್ವಾರ್ ಕೆಲ ದಿವಸಗಳ ಹಿಂದೆ ಸತಿ ಆಚರಿಸಿದಳು : ಆಕೆಯು ಪತಿ ದೀರ್ಘ ಖಾಯಿಲೆಯಿಂದ ನರಳಿ ನಿಧನಗೊಂಡನು : ಆಕೆಯು ಗಂಡನ ಚಿತೆಯ ಮೇಲೆ ಹಾರಿ ಸುಟ್ಟುಕೊಂಡಳು ; ಇದನ್ನು 4000 ಕ್ಕೂ ಹೆಚ್ಚು ಮಂದಿ ನೋಡಿದರು ; ತಾನು ಸತಿ ಆಚರಿಸುವುದಾಗಿಯೂ, ತಾನು ತನ್ನ ಗಂಡನಿಂದ ಬೇರ್ಪಡುವ ಸಂಕಟವನ್ನು ಸಹಿಸಲಾರನೆಂದೂ ಕೆಲವು ದಿನಗಳ ಹಿಂದೆಯೇ ಹೇಳಿದ್ದಳು. (ಟ್ರೂತ್)

ನಾಚಿಕೆಗೇಡು

ಕಲ್ಕತ್ತಾದ ಒಂದು ಔಷಧಾಲಯವು ಪಶ್ಚಿಮ ಬಂಗಾಳ ಸರ್ಕಾರದ ವಿದ್ಯಾಭ್ಯಾಸ ಇಲಾಖೆಯಿಂದ ಕಿಶಾಲಯ ಎಂಬ ಪುಸ್ತಕ ಮಾರುವ ಏಜೆನ್ಸಿಯನ್ನು ಪಡೆಯಿತು.

ಪುಸ್ತಕವು ಮಾರುಕಟ್ಟೆಯಲ್ಲಿ ಕೆಲವು ತಿಂಗಳುಗಳಿಂದ ಏಕೆ ದೊರೆಯುತ್ತಿಲ್ಲ ಎಂಬುದನ್ನು ತನಿಖೆ ನಡೆಸಿದ ಪತ್ತೇದಾರಿ ಪೋಲೀಸರು ಕಂಡುಹಿಡಿದಿದು ಇದು.

ತನಿಖೆಯಲ್ಲಿ— ಆ ಪುಸ್ತಕ ಮಾರಲು ಏಜೆನ್ಸಿ ಪಡೆದ ಅನೇಕ ವ್ಯಾಪಾರ ಸಂಸ್ಥೆಗಳು ' ಇಲ್ಲವೇ ಇಲ್ಲವೆಂದೂ, ಇವುಗಳಿಗೆ ಏಜೆನ್ಸಿ ಕೊಡುವುದಕ್ಕೆ ಮುಂಚೆ ಸಂಬಂಧಪಟ್ಟ ಇಲಾಖೆಯು ಯಾವ ವಿಚಾರಣೆಯನ್ನೂ ನಡೆಸಲೇ ಇಲ್ಲವೆಂದೂ ತಿಳಿಸಿತ್ತದೆ.

ಆ ಪುಸ್ತಕಕ್ಕೆ ಕಲ್ಕತ್ತಾದಲ್ಲಿ ಸುಮಾರು 280 ಏಜೆಂಟರು !

† ಲೇವಡಿ ಸಮಾಚಾರವಾದ ಈ ವಿಷಯದ ಬಗ್ಗೆ ವಿಚಾರಣೆ ನಡೆಸಿ ಈ ಅಕ್ಷಮ್ಯ ಅಪರಾಧಕ್ಕೆ ಕಾರಣರಾದವರನ್ನು ಶಿಕ್ಷಿಸಬೇಕು. — Truth

---

50 ಕೋಟಿ ವರ್ಷಗಳ ಹಿಂದಿನ

ಫ್ರಿಬರ್ಗ್ ಬ್ರಿಸ್ಗ್ (ಡಾಡ್)— ಬಾಡ್ ನಾಹೀಮಿನ ಪ್ರಯೋಗಾಲಯದಲ್ಲಿ ಕೆಲಸಮಾಡುತ್ತಿರುವ ಸಂಶೋಧಕರು ಜರ್ಮನಿಯ ಕಲ್ಲಿದ್ದಲು ಗಣಿಗಳಲ್ಲಿ ಅತ್ಯಂತ ಆಳದಲ್ಲಿ ದೊರಕಿದ ಜಲವನ್ನು ಪರೀಕ್ಷಿಸಿ ಅದರಲ್ಲಿರುವ ಬ್ಯಾಕ್ಟೀರಿಯ ಸುಮಾರು 23 ಕೋಟಿ ವರ್ಷಗಳ ಹಿಂದಿನದೆಂದು ತಿಳಿದಿದ್ದಾರೆ ; ಇದೇ ಜರ್ಮನ್ ವಿಜ್ಞಾನಿಗಳು ಸೈಬೀರಿಯಾ ಕೆನಡಾ ಅಮೇರಿಕಾದ ಇನ್ನೂ ಪುರಾತನ ಉಪ್ಪಿನ ಗಣಿಗಳಲ್ಲಿ ಶೋಧನಡೆಸಿ 50 ಕೋಟಿ ಹಿಂದಿನದೆಂದು ಹೇಳಿರುವ ಬ್ಯಾಕ್ಟೀರಿಯದ ಇರುವಿಕೆಗಳನ್ನು ಕಂಡುಹಿಡಿದಿದ್ದಾರೆ : ಈ ಕಂಡುಹಿಡಿಯುವಿಕೆಯು ಪುರಾತನ ಜೀವಿತಗಳ ಐತಿಹ್ಯದ ಮೇಲೆ ಬೆಳಕು ಚೆಲ್ಲಲಿದೆ. (ಯೂ ಗಿ ಎಸ್)

ಗೋರಕ್ಷಣೆ ಪ್ರಾಣದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Sri 'SATYAVADI' Daily

Chamarajapuram, Mysore 4

ವುಡ್‌ಲಾಂಡ್ ಜನಪ್ರಿಯ 2 ನೇ ವಾರ

ಶಿ ಸು

ಹೋಮಿ ವಾಡಿಯಾರವರ ಈಸ್ಟ್‌ಮನ್ ಕಲರಿನ

.... ಅದ್ಭುತ ಸನ್ನಿವೇಶಗಳಿಂದ ಕೂಡಿದ ಮನಮೋಹಕ ಹಿಂದಿ ಚಿತ್ರ ....

ಚಾರ್ ದರ್ವೇಶ್ Char Darvesh

ಭೂಮಿಕೆಯಲ್ಲಿ— ಫಿರೋಜ್‌ಖಾರ್, ಸಯೀದಾ ಖಾರ್, ನಾಜ್

[ದಿನವಹಿ 3 ಪ್ರದರ್ಶನಗಳು]

ಆಪೆರಾ— **4—9—64 ರಿಂದ**

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ನತಿಲಕೆ

ಪಾತ್ರಧಾರಿಗಳು— ರಾಜಕುಮಾರ್, ಸಾಹುಕಾರ್ ಜಾನಕಿ, ರತಿದೇವಿ

SHAKTI SUDHA

Superb Tonic

Help The ' Gorakshana'

" ಗೋರಕ್ಷಣಾ " ಕ್ಕೆ ಬೆಂಬಲಿಗರಾಗಿರಿ

ಕರ್ನಾಡನಾಡಿನಲ್ಲಿ. ಗೋಂಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ್ದ ಏಕೈಕ ಮಾಸಪತ್ರಿಕೆ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿನಂದನಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ

ವಿಳಾಸ— ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

*

ಚಂದಾ ವಾಯಿದೆ ಮುಗಿದಿರುವವರು ದಯವಿಟ್ಟು ಶೀಘ್ರವೆ ನವೀಕರಿಸಬೇಕಾಗಿ ವಿನಂತಿ ; ಅಭಿನಂದನಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ನೆರವು ನೀಡಿ. ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.